ನೆಡುವ ಗದ್ದೆಯಲ್ಲಿ ಒಂದು ಸೈಂಧವ ಏಡಿ ಉಂಟಂತೆ. ಕಡ್ಡಿ ಕೊಟ್ಟರೆ ಪಟಕ್ಕಂತ ತುಂಡು ಮಾಡುತ್ತಂತೆ. ಒಂದನ್ನು ಹಿಡಿದು ಅದು ಹೇಗಿದೆ, ಎಷ್ಟು ಕೈ-ಕಾಲು ಇದೆ, ಕಡ್ಡಿ ಕೊಟ್ಟು ಹೇಗೆ ತುಂಡು ಮಾಡುತ್ತೋ ನೋಡಬೇಕು.

ಅಮ್ಮನ ಮೇಲಿರುವ ಸಿಟ್ಟೆಲ್ಲಾ ಕರಗಿ, ಮಾಡಲಿರುವ ಕೆಲಸಗಳ ಬಗ್ಗೆ ಗಹನ ವಿಚಾರ ನಡೆಸಿದ ಜನ್ನು. ಸರಿ, ಯಾವುದಕ್ಕೂ ಮೊದಲು ತಿಮ್ಮುವನ್ನು ಹುಡುಕಬೇಕು ಎಂದುಕೊಂಡವನಿಗೆ ತಿಮ್ಮುವಿಗಾಗಿ ಚಡ್ಡಿಯ ಕಿಸೆಯಲ್ಲಿ ಅಡಗಿಸಿಟ್ಟಿದ್ದ ರವೆ ಉಂಡೆಯ ನೆನಪಾಯಿತು... ಅದನ್ನು ಕಂಡು ತಿಮ್ಮುವಿಗೆ ಎಷ್ಟು ಖುಷಿಯಾಗ್ತದೆ ಎಂದುಕೊಂಡು ಅವನ ಮನೆ ಕಡೆ 'ಭುರ್ರ್...' ಅಂತ ಸ್ಕೂಟರ್ ಬಿಟ್ಟುಕೊಂಡು ದೌಡಾಯಿಸಿದ. ತಿಮ್ಮು ಹಟ್ಟಿ ಹೊರಗೆ ಎಂದಿನಂತೆ ರಾಜು ನಾಯಿ ಕೂತಿದ್ದ. ಜನ್ನುವನ್ನು ನೋಡಿದವನೇ ವಿಶ್ವಾಸದಿಂದ ಬಾಲವಾಡಿಸುತ್ತಾ ಬಂದ. ಜನ್ನು, 'ಎಂಥದೋ ರಾಜು' ಎಂದು ಅವನ ಮೈದಡವಿದ. ರಾಜುವಿಗೆ ಅಷ್ಟೇ ಸಾಕಾಯ್ತು. ಜನ್ನುವಿನ ಕೈ-ಕಾಲು ನೆಕ್ಕಲು ಶುರು ಮಾಡಿದ. ಜನ್ನುವಿಗೆ ಖುಷಿಯಾಗಿ ಅವನೊಂದಿಗೆ ಸ್ವಲ್ಪ ಹೊತ್ತು ಆಟವಾಡಿದ. ಆಮೇಲೆ ನೆನಪಾಯಿತು. ತಾನು ಬಂದಿದ್ದು ತನ್ನ ದೋಸ್ತಿಗೋಸ್ಕರ ಅಂತ. 'ಏ, ತಿಮ್ಮೂ...' ಎಂದು ಬೊಬ್ಬೆ ಹಾಕಿದ. ಯಾರೂ ಓಗೊಡಲಿಲ್ಲ. ಎರಡು ಮೂರು ಸಲ ಕರೆದ ಮೇಲೆ ಅವರಮ್ಮ ಹಗುರಕ್ಕೆ ಬಂದರು. 'ತಿಮ್ಮು ಅವರಪ್ಪನೊಟ್ಟಿಗೆ ಕೆಲಸಕ್ಕೆ ಹೋಗಿದ್ದಾನೆ' ಎಂದರು ನರಳುತ್ತಾ. ಪಾಪ, ಅವರಿಗೆ ಯಾವತ್ತೂ ಜಡ್ಡು-ಜಾಪತ್ರೆ ಅಂತ ತಿಮ್ಮು ಹೇಳುತ್ತಿದ್ದದ್ದು ನೆನಪಾಯಿತು ಜನ್ನುವಿಗೆ. ಬೆಳಗಿನ ತಿಂಡಿ ಪುರಾಣದಿಂದ ಬೇಜಾರಾಗಿದ್ದ ಜನ್ನುವಿಗೆ ಇನ್ನೊಮ್ಮೆ ಆಶಾಭಂಗವಾಯ್ತು.

'ನಾನೊಬ್ಬನೇ ಎಂಥ ಅಲಿಯುವುದು? ತಿಮ್ಮುವಿದಿದ್ದದ್ದರೆ ಏನೆಲ್ಲಾ ಮಾಡಬಹುದಿತ್ತು? ನಾನೇನು ಒಂಟಿ ಭೂತವಾ?' ಅಂತ ಗೊಣ ಗೊಣ ಮಾಡಿಕೊಂಡು ಸಿಟ್ಟಲ್ಲಿ ಕಾಲಪ್ಪಳಿಸಿ ಜನ್ನು ಅಲ್ಲಿಂದ ಹೊರಟ. ರಾಜು ನಾಯಿ ಪಾಪ, ಇನ್ನೂ ಅಲ್ಲೇ ನಿಂತಿದ್ದ, ಜನ್ನು ಹೊರಟೊಡನೆ ಅವನೂ ಕೂಡಾ ಹಿಂದೆಯೇ ಹೊರಟ. ಗಿರಿರಾಜ ಕೋಳಿ ಪಾಗಾರದ ಮೇಲೆ ಧಿಮಾಕಿನಿಂದ ನಿಂತಿತ್ತು. ಬೇರೆ ದಿನವಾದರೆ ಅದನ್ನು ಓಡಿಸಿಕೊಂಡು ಹೋಗಿ ಮುಟ್ಟುವ ಆಟವಾಡುತ್ತಿದ್ದ ಜನ್ನು, ಇವತ್ತು ಅದಕ್ಕೂ ಮನಸ್ಸಿರಲಿಲ್ಲ. ಜನ್ನು ಪಾಗಾರ ದಾಟಿದೊಡನೆ ರಾಜ 'ಕುಂಯಿ, ಕುಂಯಿ...' ಅಂತ ಅವನನ್ನು ಕರೆಯುವ ಪ್ರಯತ್ನ ಮಾಡಿದ. ಜನ್ನು ಓಗೊಡಲೇ ಇಲ್ಲ. ಸೀದಾ ಮುಂದೆ ಹೋಯಿತು ಸವಾರಿ. ಪೆಚ್ಚಾಗಿ ರಾಜು ನಾಯಿ ಅಲ್ಲೇ ಕೂತ. ಸ್ಕೂಟರ್ ಈಗ ಓಡಲಿಲ್ಲ, ನಿಧಾನವಾಗಿ ಕಾಲೆಳೆದುಕೊಂಡು ಬೆಟ್ಟುಗದ್ದೆಗೆ ಬಂದ. ಅಲ್ಲಿ ಪಕ್ಕದಲ್ಲೇ ಒಂದು ಚಿಕ್ಕ ಮಾವಿನ ಮರ. ಅದರ ಕೊಂಬೆ ಮೇಲೆ ಕೂತು ಅದರ ಎಲೆಗಳನ್ನ ಕಿತ್ತು ಕಿತ್ತು ಹಾಕಿದ. 'ಅಮ್ಮ ಯಾವಾಗ್ಲೂ ಹೇಳ್ತಾಳೆ, ಗಿಡ-ಮರಕ್ಕೆ ನೋವಾಗುತ್ತೆ ಅಂತ. ಆದ್ರೆ ಆಗಲಿ. ಅಮ್ಮನ ಹತ್ರ ನಾ ಕಿತ್ತಿದ್ದು ಹೇಳೋದೇ ಇಲ್ಲ' ಎಂದಂದುಕೊಂಡ. ಸ್ವಲ್ಪ ಹೊತ್ತಲ್ಲಿ ಅದೂ ತಪ್ಪು ಅನಿಸಿ ಕೀಳುವುದನ್ನು ಬಿಟ್ಟು ಸುಮ್ನೆ ಕಾಲಾಡಿಸುತ್ತಾ ಕುಳಿತ.

ಆಮೇಲೆ ಆಚೆ ಮನೆಯ ಕಮಲತ್ತೆಯ ಬಳಿ ಹೋಗೋಣವೆನಿಸಿತು. ಅಲ್ಲಿಗೆ ಹೊರಟ. ಅಲ್ಲಿ ಹೋದರೆ ಸುಟ್ಟ ಗೇರುಬೀಜ, ಇಲ್ಲವಾದರೆ ಏನಾದರೂ ತಿಂಡಿ ಕೊಡುತ್ತಾರೆ ಕಮಲತ್ತೆ ಅಂದುಕೊಂಡ. ಕಮಲತ್ತೆ ಮನೆ ಅಂಗಳದ ಕಮಾನಿಗೆ ಹಬ್ಬಿಸಿದ್ದ ಮಿಠಾಯಿ ಹೂವಿನ ಬಳ್ಳಿಯನ್ನು ಬಗ್ಗಿಸಿ ಹೂವೊಂದನ್ನು ಕಿತ್ತ. ಅಂಗಳಕ್ಕೆ ಬಂದು ನೋಡುತ್ತಾನೆ. ಜಗಲಿಯಲ್ಲಿ ಶೀನಜ್ಜ ಕೂತು ಎಲೆ-ಅಡಿಕೆ ಕುಟ್ಟುತ್ತಿದ್ದಾರೆ. ಯಾವಾಗಲೂ ಬೊಗಳಿ ಗಲಾಟೆ ಮಾಡುವ ಟೈಗರ್ ನಾಯಿ ದೂರದ ಬಾವಿಯಾಚೆಗೆ ತಣ್ಣಗೆ ಮಲಗಿದ್ದ. ಕೂಡಲೇ ಹೂವನ್ನು ಬೆನ್ನ ಹಿಂದೆ ಅಡಗಿಸಿಕೊಟ್ಟುಕೊಂಡ. ಅಜ್ಜನ ಹಾಗೂ ಟೈಗರ್ ಗಮನಕ್ಕೆ ಬಾರದಂತೆ ಹಿತ್ತಲ ಬಾಗಿಲ ಕಡೆ ಮೆತ್ತಗೆ ಜಾರಿಕೊಂಡ. ಟೈಗರ್ ನಾಯಿಗೆ ಇವನ ಬರುವು ತಿಳಿಯದಿರುತ್ತದೆಯೇ... ಅವನೋ ಬೆಳಗ್ಗೆಯಿಂದ ಹೊಟ್ಟೆ ನೋವಲ್ಲಿ ಬೊಗಳಲೂ ಉತ್ಸಾಹವಿಲ್ಲದೇ ಸುಮ್ಮಗೆ

